**ದಿನಾಂಕಃ06-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ- ಪ್ರತಿವಾದಿಯ ಪರ ಶ್ರೀ.ಎನ್.ಎಸ್.ಎಸ್, ವಕೀಲರಿಂದ:-**

ದಾವಾ ಸ್ವತ್ತು ಅಂಗಡಿಯಾಗಿರುತ್ತದೆ. ಪ್ರತಿವಾದಿಯು ಈ ದಾವೆಯನ್ನು ಹಾಕುವ ಮೊದಲು ನನಗೆ ಪರಿಚಯ ಇರುವುದಿಲ್ಲ. ಇಲ್ಲಿಯವರೆಗೂ ನಿಮಗೂ ಮತ್ತು ಪ್ರತಿವಾದಿಗೂ ಮುಖಮುಖಿಯಾಗಿ ಬೇಟಿಯಾಗಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಿಮ್ಮ ಮತ್ತು ಪ್ರತಿವಾದಿಯ ನಡುವೆ ಯಾವುದೇ ರೀತಿಯಾಗಿ ಇಲ್ಲಿಯವರೆಗೂ ಮಾತುಕತೆ ಯಾಗಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಬಟ್ಟೆ ಅಂಗಡಿಯನ್ನು ಇಟ್ಟುಕೊಂಡಿದ್ದಾರೆ. ನನಗೆ ಪ್ರತಿವಾದಿಯ ತಂದೆಯ ಹೆಸರು ಗೊತ್ತಿಲ್ಲ. ವಾದಪತ್ರ ಅಥವಾ ಪ್ರತಿವಾದಿಗೆ ಕಾನೂನು ಬದ್ದ ನೋಟೀಸನ್ನು ಕಳುಹಿಸುವ ಸಮಯದಲ್ಲಿ ನಾನು ಅವರ ತಂದೆಯ ಹೆಸರನ್ನು ನಮೂದಿಸಿರುವುದಿಲ್ಲ.ಈ ದಾವೆಯನ್ನು ಹಾಕುವ ಸಮಯದಲ್ಲಿ ಪ್ರತಿವಾದಿಯು ಯಾವ ದಾಖಲೆಯ ಅನ್ವಯ ಮತ್ತು ಎಷ್ಟು ವರ್ಷಗಳಿಂದ ದಾವಾ ಸ್ವತ್ತಿನಲ್ಲಿ ಬಾಡಿಗೆದಾರರಾಗಿ ಇದ್ದಾರೆ ಎನ್ನುವ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಮತ್ತು ನಾನು ನೋಟೀಸನ್ನು ಕಳುಹಿಸಿದ ಸಮಯದಲ್ಲಿ ಪ್ರತಿವಾದಿಯು ಅದರ ಬಗ್ಗೆ ಒಪ್ಪಿಕೊಂಡಿರುತ್ತಾರೆ ಮತ್ತು ಬಾಡಿಗೆಯನ್ನು ನನ್ನ ತಂದೆ-ತಾಯಿಗೆ ನೀಡುತ್ತಿರುವುದಾಗಿ ತಿಳಿಸಿರುತ್ತಾರೆ. ನೀವು ಪ್ರತಿವಾದಿಗೆ ವಕೀಲರ ಮೂಲಕ ಕಾನೂನು ಬದ್ದ ನೋಟೀಸನ್ನು ಕಳುಹಿಸುವ ಸಮಯದಲ್ಲಿ ಪ್ರತಿವಾದಿಯು ಎಷ್ಟು ವರ್ಷದಿಂದ ಮತ್ತು ಯಾರ ಅಡಿಯಲ್ಲಿ ಬಾಡಿಗೆದಾರರಾಗಿ ಇದ್ದಾರೆ ಎಂದು ತೋರಿಸಲು ನಿಮ್ಮ ವಕೀಲರಿಗೆ ಯಾವ ದಾಖಲೆಯನ್ನು ತೋರಿಸಲು ನೀಡಿದ್ದೀರಾ ಎಂದರೆ ಸಾಕ್ಷಿಯು

2 ರಿಂದ 3 ಭಾರಿ ಈ ಪ್ರಶ್ನೆಯನ್ನು ಕೇಳಿದರು ಸಹ ದಾಖಲೆಯ ಬಗ್ಗೆ ತಾನೇ ದಾವಾ ಸ್ವತ್ತಿನ ಮಾಲೀಕರು ಎಂದು ಹೇಳಿರುತ್ತಾರೆ. ನೀವು ಪ್ರತಿವಾದಿಯು ಯಾವ ವರ್ಷದಿಂದ ಬಾಡಿಗೆದಾರರಾಗಿ ಇದ್ದಾರೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ನಿಮ್ಮ ವಕೀಲರಿಗೆ ನೀಡದೇ ಆಗೆ ಕಾನೂನು ಬದ್ದ ನೋಟೀಸನ್ನು ಪ್ರತಿವಾದಿಗೆ ನೀಡಿರುತ್ತೀರಾ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

2. ಈಗ ಸಾಕ್ಷಿಗೆ ತಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ದಾಖಲೆಗಳನ್ನು ತೋರಿಸಿದ್ದು, ಅದರಲ್ಲಿ ಪ್ರತಿವಾದಿಯೂ ಯಾವ ವರ್ಷದಿಂದ ಬಾಡಿಗೆಗೆ ಇದ್ದಾರೆ ಎಂದು ತೋರಿಸುವ ದಾಖಲೆ ಯಾವುದು ಎಂದರೆ ಸಾಕ್ಷಿಯು ಯಾವ ದಾಖಲೆಯು ಇರುವುದಿಲ್ಲ ಮತ್ತು ತನ್ನ ತಂದೆ-ತಾಯಿ ಮೃತಪಟ್ಟ ನಂತರ ದಾವಾ ಸ್ವತ್ತು ತನಗೆ ಬಂದಿದೆ ಎನ್ನುತ್ತಾರೆ. ಪ್ರತಿವಾದಿಯು ಎಷ್ಟು ವರ್ಷಗಳಿಂದ ಬಾಡಿಗೆ ದಾರರನಾಗಿ ಇದ್ದಾರೆ ಎನ್ನುವ ಬಗ್ಗೆ ನಾನು ವಾದ ಪತ್ರ ಅಥವಾ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ. 2008 ನೇ ಇಸವಿಯಿಂದ ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಇರಬಹುದಾ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ.

3. ನಾನು ನನ್ನ ತಂದೆ-ತಾಯಿಯು ಜೊತೆ ಒಳ್ಳೆಯ ವಿಶ್ವಾಸದಿಂದ ಇದ್ದೆ. 2020 ನೇ ಇಸವಿಯಲ್ಲಿ ನನ್ನ ತಂದೆ ಮತ್ತು 2021 ನೇ ಇಸವಿಯಲ್ಲಿ ನನ್ನ ತಾಯಿಯು ಮೃತಪಟ್ಟಿರುತ್ತಾರೆ. ನಾನು ನನ್ನ ತಂದೆ-ತಾಯಿ ಜೊತೆಯಲ್ಲಿ ವಾಸ ಮಾಡಿರುವುದಿಲ್ಲ ಮತ್ತು ನಾನು ಬಸವೇಶ್ವರ ನಗರದಲ್ಲಿ ಇರುವ ನನ್ನ ಗಂಡನ ಮನೆಯಲ್ಲಿ ಇದ್ದೇನು. ನಾನು 1988 ನೇ ಇಸವಿಯಲ್ಲಿ ಮದುವೆಯಾಗಿರುತ್ತೇನೆ ಮತ್ತು ಮದುವೆಯಾದ ದಿನದಿಂದ ನನ್ನ ಗಂಡನ ಮನೆಯಲ್ಲಿ ವಾಸಿಸುತ್ತಿದ್ದೇನೆ. ದೊಡ್ಡಬಾಳ್ಳಾಪುರದಲ್ಲಿ ನಮ್ಮ ತಂದೆಯ ಕುಟುಂಬಕ್ಕೆ ಸೇರಿರುವ

ಯಾವುದೇ ಆಸ್ತಿಗಳು ಇರುವುದಿಲ್ಲ. ಬೆಂಗಳೂರು ನಗರದಲ್ಲಿ ನನ್ನ ತಂದೆಯ ಕುಟುಂಬಕ್ಕೆ ಸೇರಿರುವ ಆಸ್ತಿಗಳ ಬಗ್ಗೆ ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**